

# ಬೆಳ್ಳಿಯ ಗೆಜ್ಜೆ ಕುಣಿದಾಡುತಾವ್ರೊ..!



**ಫ್ಯಾಷನೆಬಲ್ ಆಗಿರುವ ಬೆಳ್ಳಿಯ ಆಭರಣಗಳು ಮತ್ತೆ ಟ್ರೆಂಡ್ ಆಗುತ್ತಿವೆ. ಬೆಳ್ಳಿ ಕಾಲುಂಗುರ, ಕಾಲ್ಗೆಜ್ಜೆ ಮಾತ್ರವೇ ಹೆಚ್ಚು ಜನಪ್ರಿಯವಾಗಿದ್ದ ಕಾಲ ಹೋಗಿ ಬೆಳ್ಳಿ ನೆಕ್ಲೆಸ್, ಕಿವಿಯೋಲೆಗಳು ಫ್ಯಾಷನ್ ಪ್ರಪಂಚದಲ್ಲಿ ಮಿಂಚಲಾರಂಭಿಸಿದೆ.**

**■ ಕೃಷ್ಣವೇಣಿ ಪ್ರಸಾದ್ ಮುಳಿಯ**

**ಚಿತ್ರಕೃಪೆ: ಮುಳಿಯ ಕೇಶವ ಭಟ್ ಅಂಡ್ ಸನ್ಸ್**

ಬೆಳ್ಳಿ ಆಭರಣ ಮತ್ತೆ ಫ್ಯಾಷನ್ ಟ್ರೆಂಡ್ ಆಗಿದೆ. ಬೆಳ್ಳಿ ಸೊಂಟಪಟ್ಟಿ, ನೆಕ್ಲೆಸ್. ಕಿವಿಯೋಲೆಗಳು ಫ್ಯಾಷನ್‌ಪ್ರಿಯರ ಮನ ತಣಿಸುತ್ತಿವೆ. ಮಾರುಕಟ್ಟೆಯಲ್ಲಿ ಬೆಳ್ಳಿ ಆಭರಣಕ್ಕೆ ಬೇಡಿಕೆಯೂ ಹೆಚ್ಚಾಗಿದೆ.

ಶೃಂಗಾರ ಎನ್ನುವ ಪದದಲ್ಲಿ ಹಲವಾರು ವಿಧ. ನಾಟ್ಯದಲ್ಲಿ, ಅಭಿನಯ ದಲ್ಲಿ, ಅಲಂಕಾರದಲ್ಲಿ ಬೇರೆ ಬೇರೆ ರೂಪದಲ್ಲಿ ವಿವಿಧ ಹಾವ ಭಾವಗಳಲ್ಲಿ ಶೃಂಗಾರ ಎನ್ನುವುದು ಒಂದು ಅದ್ಭುತವಾದ ಕಲೆ. ಈ ಶೃಂಗಾರವನ್ನು ಇಷ್ಟ ಪಡದವರಿಲ್ಲ. ಏಕೆಂದರೆ ನವಿಲಿನ ನಾಟ್ಯದಲ್ಲಿ ಅದರ ಗರಿಯು ಶೃಂಗರಿಸಿರುವು ದರಿಂದಾಗಿಯೇ ನವಿಲಿನ ನರ್ತನ ಪ್ರಸಿದ್ಧಿ ಪಡೆಯಿತು. ಅಂದರೆ ಕಣ್ಣಿಗೆ ಅಂದವನ್ನು ಕೊಡುವುದು ಈ ಶೃಂಗಾರ.

ನಾಟ್ಯದಲ್ಲಿ, ಅಭಿನಯದಲ್ಲಿ, ಸಮಾರಂಭಗಳಿಗೆ ಹೋಗುವಾಗ, ಪೂಜೆಗೆ ಕುಳಿತಾಗ, ದೇವಸ್ಥಾನಗಳಿಗೆ ಹೋಗುವಾಗ, ಮದುಮಗಳ ಸಿಂಗಾರ.. ಹೀಗೆ ಶೃಂಗಾರ ಎನ್ನುವುದು ಎಲ್ಲಾ ಶುಭ ಸಂಭ್ರಮಗಳಲ್ಲಿ ಪ್ರಾಮುಖ್ಯತೆ ಪಡೆದಿದೆ. ಭಾರತೀಯ ಸಂಸ್ಕೃತಿಯಲ್ಲಿ ಶೃಂಗಾರ ಕಲೆಗೆ ಮಹತ್ತರವಾದ ಪ್ರಾಶಸ್ತ್ಯವಿದೆ. ಪುಟ್ಟ ಮಗುವಿನಿಂದ ಹಿಡಿದು ಎಂಬತ್ತು ದಾಟಿದ ವಯಸ್ಕರಿಗೂ ತಾನು ಎಳೆಯ ವಯಸ್ಸಿನವರಂತೆ ಗೋಚರಿಸಬೇಕು ಎನ್ನುವುದು ಅಂತರಂಗದ ಮಾತು. ನಮ್ಮ ಮನಸ್ಸು ಎಳೆತನದಲ್ಲಿಯೇ ಇದ್ದಾಗ ಪ್ರಫುಲ್ಲವಾಗಿರುತ್ತದೆ, ಉತ್ಸಾಹ ಇರುತ್ತದೆ. ಹಾಗೆ ಇದ್ದಾಗ ಜೀವನ ಸದಾ ಹಚ್ಚಹಸಿರಾಗೇ ಇರುತ್ತದೆ. ವಯಸ್ಸಾಯಿತು ಎಂದು ಎಲ್ಲಾ ಶೃಂಗಾರವನ್ನು ಬಿಟ್ಟಾಗ ನಮ್ಮ ಸುಪ್ತ ಮನಸ್ಸಿನ ಎಲ್ಲಾ ಭಾವನೆಗಳು ಕುಗ್ಗುತ್ತಾ ಹೋಗುತ್ತದೆ. ಅದಕ್ಕೆ ಸದಾ ಲವಲವಿಕೆಯಿಂದ ಇರಲು ಶೃಂಗಾರ ಕಲೆಯನ್ನು ರೂಢಿಸಿಕೊಳ್ಳಬೇಕು.

ಅದು ನಮ್ಮಿಂದಲೇ ಸಾಧ್ಯ. ಅಂತಹ ಆಂತರಿಕ ಮನಸ್ಸನ್ನು ನಾವು ಎಚ್ಚರಿಸ ಬೇಕು. ಶೃಂಗಾರದಲ್ಲಿ ಆಭರಣ, ಬಟ್ಟೆ, ಬ್ಯಾಗು, ಮುಖದ ಕಾಂತಿವರ್ಧಕಗಳು, ಬೊಟ್ಟು ಹೀಗೆ ನಾನಾ ಅಲಂಕಾರಗಳು ಒಂದಕ್ಕೊಂದು ಹೊಂದಿಕೊಳ್ಳಬೇಕು. ಆಗ ಅದು ಪರಿಪೂರ್ಣ ಶೃಂಗಾರವಾಗುತ್ತದೆ. ಎಲ್ಲಾ ಸಾಮಾಗ್ರಿಗಳನ್ನು ಒಂದಕ್ಕೊಂದು ಹೊಂದಿ ಕೊಳ್ಳುವಂತೆ ಖರೀದಿಸುವುದು ಕಡಿಮೆ ಖರ್ಚಿನಲ್ಲಿ ಸಾಧ್ಯ. ಆದರೆ ಆಭರಣದ ಮಾತು ಬಂದಾಗ ನಾವು ಆಲೋಚಿಸಬೇಕು. ಇದಕ್ಕೆ ಸೂಕ್ತವಾದದ್ದು ಎಂದರೆ ಅದು ಬೆಳ್ಳಿ ಆಭರಣ. ಇದು ವಿಶೇಷವಾಗಿ ಇತರ ಆರ್ಟಿಫೀಶಿಯಲ್ ಆಭರಣಕ್ಕಿಂತ ಹೆಚ್ಚಿನ ಮೆರಗನ್ನು ಕೊಡುತ್ತದೆ. ಅಲ್ಲದೆ ಈಗಿನ ಆಧುನಿಕ ಯುಗದಲ್ಲಿ ಇದು ಸೂಕ್ತವಾಗಿದೆ. ಏಕೆಂದರೆ ಬೆಳ್ಳಿಯ ಬಣ್ಣ ಎಲ್ಲಾ ಬಟ್ಟೆಗಳಿಗೂ ಹೊಂದಿಕೊಳ್ಳುತ್ತದೆ. ಸಮಾರಂಭಗಳಲ್ಲಿ ನಮ್ಮನ್ನು ನಾವು ವಿಶೇಷವಾಗಿ ಈ ಬೆಳ್ಳಿಯ ಆಭರಣಗಳಿಂದ ಗುರುತಿಸಿಕೊಳ್ಳಬಹುದು.

## ಬೆಳ್ಳಿಯ ಆಭರಣದ ಖರೀದಿ ಹೇಗೆ?

ಯಾವ ವಿಧದ ಆಭರಣ ಯಾವಾಗ ತೊಡಬೇಕು? ಸಾಂಪ್ರದಾಯಿಕ ಆಭರಣ ಹೇಗಿದ್ದರೆ ಅಲಂಕಾರಕ್ಕೆ ಯೋಗ್ಯ? ಸಾಧಾರಣವಾಗಿ ಬೆಳ್ಳಿಯ ಆಭರಣ ಹಿಂದೆ, ಕಾಲು ಗೆಜ್ಜೆಯಾಗಿ, ಸೊಂಟದ ಪಟ್ಟಿಯಾಗಿ, ಕಾಲುಂಗುರವಾಗಿ ಬಳಕೆಯಲ್ಲಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಬೆಳ್ಳಿ ಆಭರಣವಾಗಿ ಅಂದರೆ ಕೊರಳಿಗೆ, ಕೈಗೆ, ಸೀರೆಯ ಸೊಂಟದ ಹೊರಭಾಗ.. ಹೀಗೆ ಚಿನ್ನದ ಆಭರಣದಂತೆಯೇ ಬೆಳ್ಳಿಯಲ್ಲಿಯೂ ತರ ತರದ ಆಭರಣ ಬರುತ್ತದೆ. ಇದು ಇಷ್ಟು ಪ್ರಸಿದ್ಧಿಯಾಗಲು ಕಾರಣ ಎಂದರೆ ಬೆಳ್ಳಿಯಲ್ಲಿಯೂ ರೂಬಿ, ಎಮರಾಲ್ಡ್, ಅನ್ಕಟ್ ಡೈಮಂಡ್ ಅಲ್ಲದೆ ಮುತ್ತು, ಹವಳವನ್ನು ಪೋಣಿಸಿ ಆಭರಣ ತಯಾರಿಸುವುದರಿಂದ ಅದರ ಅಂದ ಇನ್ನೂ ವೃದ್ಧಿಸುತ್ತದೆ.

ಆಭರಣದ ರೂಪುರೇಷೆಯಲ್ಲಿ ಚಿನ್ನದ ಆಭರಣದಂತೆಯೇ ಇದ್ದು ಈಗಿನ ಯುಗಕ್ಕೆ ಹೊಂದಿಕೊಂಡು ತುಂಬಾ ಫ್ಯಾಷನೆಬಲ್ ಆಗಿ ಕಾಣುತ್ತದೆ. ಎಲ್ಲರ ಕಣ್ಣಿನ ನೋಟ ಬೆಳ್ಳಿಯ ಶುದ್ಧ ಬಣ್ಣದಿಂದಾಗಿ ಗಮನ ಸೆಳೆಯುತ್ತದೆ. ಅಲ್ಲದೆ ಬೆಳ್ಳಿಯ ಬಣ್ಣದಲ್ಲಿ ಕೆಂಪು, ಹಸಿರು, ಕಲ್ಲುಗಳು ಇನ್ನೂ ಎದ್ದು ಕಾಣುತ್ತದೆ. ಇತ್ತೀಚಿಗಿನ ದಿನಗಳಲ್ಲಿ ಆಭರಣಕ್ಕೆ ಹೊಸ ರೂಪಗಳನ್ನು ಕೊಡುವಲ್ಲಿ ಬೆಳ್ಳಿ ಅತ್ಯಂತ ಉನ್ನತ ಸ್ಥಾನದಲ್ಲಿದೆ. ಯುವತಿಯರಿಗೆ ಇದು ತುಂಬಾ ಒಪ್ಪವಾಗಿ ಒಪ್ಪುತ್ತದೆ. ಕಾಲೇಜು ಕಾರ್ಯಕ್ರಮದಲ್ಲಿ, ಕಚೇರಿಯ ಸಮಾರಂಭಗಳಲ್ಲಿ ಇದನ್ನು ತೊಟ್ಟಾಗ ವಿಭಿನ್ನವಾಗಿ ನಮ್ಮನ್ನು ನಾವು ಗುರುತಿಸಿಕೊಳ್ಳಬಹುದು.

ಇನ್ನು ಆಭರಣಕ್ಕೆ ಆ್ಯಂಟಿಕ್ ನೋಟ ಹೊಂದಿದ ಬೆಳ್ಳಿಯ ಆಭರಣ, ಹೊಳಪಿನ ಆಭರಣ ಹೀಗೆ ಹಲವಾರು ವಿಧದಲ್ಲಿಯೂ ಲಭ್ಯವಿದೆ. ನೆಕ್ಲೆಸ್, ಕಿವಿಯೋಲೆ, ಉಂಗುರ, ಬ್ರೇಸ್ಲೆಟ್.. ಹೀಗೆ ಸಂಪೂರ್ಣ ಆಭರಣದ ಸೆಟ್‌ಗೆ 10 ರಿಂದ 12 ಸಾವಿರದಲ್ಲಿ ಲಭಿಸುತ್ತದೆ. ಅಂದರೆ ಅಭೂತಪೂರ್ವ ವಿನ್ಯಾಸ, ಕಡಿಮೆ ಖರ್ಚಿನಲ್ಲಿ ಸಂಪೂರ್ಣ ಸೆಟ್ ಲಭ್ಯ.

ಸಾಂಪ್ರದಾಯಿಕವಾದ ನೆಕ್ಲೆಸ್‌ಗೆ 30ಗ್ರಾಂ ಬೆಳ್ಳಿಯನ್ನು ಬಳಸಿ ಮಾಡಿದಾಗ ಅದು ದೊಡ್ಡದಾಗಿ ಎದ್ದು ಕಾಣುತ್ತದೆ. ಜುಮ್ಕಾ ವಿನ್ಯಾಸವನ್ನು ಅಳವಡಿಸಿ ಬೆಳ್ಳಿಯ ಗುಂಡುಗಳನ್ನು ಹಾಕಿ ಕಣ್ಣಿಗೆ ಅಂದವಾಗಿ ಕಾಣುವಷ್ಟು ದೊಡ್ಡದಾದ ಕಲ್ಲುಗಳನ್ನು ಅಳವಡಿಸಿದಾಗ ಅದರ ಅಂದ ಇನ್ನೂ ಹೆಚ್ಚುತ್ತದೆ. ಇದು ಕುತ್ತಿಗೆಯಲ್ಲಿ ತುಂಬ ಭಾರ ಎನ್ನಿಸುವುದಿಲ್ಲ. ಆ್ಯಂಟಿಕ್ ಫಿನಿಶ್ ಬೇಕಾದವರು



ಇದೇ ವಿನ್ಯಾಸದಲ್ಲಿ ಅದನ್ನು ಅಳವಡಿಸಬಹುದು. ಅದಕೊಪ್ಪುವ ಕಿವಿಯೋಲೆ ಇದು 3ರಿಂದ 5ಗ್ರಾಂ ಇದ್ದರೆ ಒಳ್ಳೆಯದು. ನೆಕ್ಲೆಸ್‌ನ ಪೆಂಡೆಂಟಿನ ಮಧ್ಯದ ವಿನ್ಯಾಸದ್ದೇ ಕಿವಿಯೋಲೆ ಹಾಕಿದಾಗ ಆಭರಣದ ಮೆರುಗು ಹೆಚ್ಚುತ್ತದೆ.

ಜೊತೆಗೆ ಅದೇ ವಿನ್ಯಾಸದ ಉಂಗುರಕ್ಕೂ ಅಷ್ಟೆ. 3 ರಿಂದ 5 ಗ್ರಾಂ ಸಾಕು. ಅದು ಬೇಕಾದಂತೆ ಹೊಂದಿಸುವ ಅಳತೆಯದ್ದಾದರೆ ತಾಯಿಗೂ ಮಗಳಿಗೂ ಇಬ್ಬರಿಗೂ ಹಾಕಬಹುದು. ಅಲ್ಲದೆ ಅದಕ್ಕೊಪ್ಪುವ ಬಳೆ ಅಥವಾ ಬ್ರೇಸ್ಲೆಟ್‌ನಲ್ಲೂ ಅದೇ ವಿನ್ಯಾಸ ಇರಬೇಕು. ಒಟ್ಟಿನಲ್ಲಿ ಎಲ್ಲಾ ಆಭರಣದಲ್ಲೂ ಕೆಂಪು ಬಣ್ಣದ ಹರಳು ಸೊಗಸಾಗಿ ಕಾಣುವಂತಿದ್ದು ಒಂದಕ್ಕೊಂದು ಹೊಂದಿಕೆ ಇರಬೇಕು. ಗಾಂಚು ಸರಿಗೆಯಲ್ಲಿ ಪೋಣಿಸಿದರೆ ಅದು ಫ್ಲೆಕ್ಸಿಬಲ್ ಆಗಿರುತ್ತದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯಲು ಸುಲಭ ■




**ಪ್ರಸಿದ್ಧಿರವರಿಂದ ಹೊಸ ವರ್ಷದ ಶುಭಾಷಯಗಳು**

New Collections for New year

Prasiddhi® SILKS

A renowned name for well known sarees

**showrooms @**

K.H. Road Ph: 22236613 | M.G. Road Ph: 25580433 | Marathahalli 9448288522/12

Bannerghatta Road Ph: 26689345 | Commercial Street Ph: 25321545 | Domlur Ph: 41511156